# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 07 | Pages. 2 | Date: 30-11-2025, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 07 - ಪುಟಗಳು : 2 | 30-11-2025 | ಭಾನುವಾರ | Ph: 8762954248 | ದರ : ₹1


## ಸರ್ಕಾರಿ ಶಾಲೆ ಮುಚ್ಚದಿರಿ: ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಮುಚ್ಚಲು ಹೊರಟಿರುವ ನಗರದ ರಾಜಘಟ್ಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಳಿಸುವಂತೆ ಎಐಡಿಎಸ್ಒ ನೇತೃತ್ವದಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಸಂಘಟನೆಯ ಜಿಲ್ಲಾ ಸಂಚಾಲಕಿ ಚೈತ್ರ, ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಗ್ರಾಮ ಪಂಚಾಯಿತಿ ಗೊಂದು ಸರ್ಕಾರಿ ಶಾಲೆ ಮಾಡುತ್ತೇವೆ ಎಂದು ಹೇಳಿ 40 ಸಾವಿರ ಕ್ಕಿಂತ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚಲು ಹೊರಟಿದೆ. ಹಾಸನದಲ್ಲೂ ಕೂಡ 1942 ಸರ್ಕಾರಿ ಶಾಲೆಗಳು ಈ ಯೋಜನೆಯಡಿಯಲ್ಲಿ ಮುಚ್ಚಿ ಹೋಗುತ್ತವೆ. ಅದರಲ್ಲಿ ಈ ರಾಜಘಟ್ಟ ಶಾಲೆ ಕೂಡ ಸೇರಿದೆ.

ಈ ಶಾಲೆಯಲ್ಲಿ ನೂರಾರು ಮಕ್ಕಳು ಶಿಕ್ಷಣ ಪಡೆದುಕೊಂಡಿದ್ದಾರೆ, 2-3 ವರ್ಷಗಳ ಹಿಂದೆ 20 ಇದ್ದ ಮಕ್ಕಳ ಸಂಖ್ಯೆ ಈಗ 41 ತಲುಪಿದೆ. ಅಷ್ಟು ಮಕ್ಕಳು ಇಲ್ಲಿ ಶಿಕ್ಷಣ ಪಡೆದು ಕೊಳ್ಳುತ್ತಿದ್ದಾರೆ.

ಊರಿನ ಗ್ರಾಮಸ್ಥರು ಹಾಗೂ ನೆರೆಯವರು ಸೇರಿ ಶಾಲೆಗೆ ಬಹಳಷ್ಟು ಸಹಾಯ ನೀಡಿ ಅದನ್ನು ಒಂದು ಮಟ್ಟಿಗೆ ಅಭಿವೃದ್ಧಿಪಡಿಸಿದ್ದಾರೆ. ಅಲ್ಲಿ ಶಿಕ್ಷಣ ಪಡೆಯುತ್ತಿರುವವರೆಲ್ಲರೂ ಕೂಡ ಬಡ ರೈತರ ಕೂಲಿ ಕಾರ್ಮಿಕರ, ವಲಸೆ ಕಾರ್ಮಿಕರ ಮಕ್ಕಳು, ಆ ಊರಿನಲ್ಲಿರುವ ಸರ್ಕಾರಿ ಶಾಲೆಯೇ ಅವರೆಲ್ಲರಿಗೂ ಪ್ರಾಥಮಿಕ ಶಿಕ್ಷಣದ ಆಸರೆ, ಆದರೆ ಅದೇ ಶಾಲೆ ಇಂದು ಕೆಪಿಎಸ್- ಮ್ಯಾಗ್ನೆಟ್ ಹೆಸರಿನಲ್ಲಿ 5 ಕಿ.ಮೀ ಗಿಂತಲೂ ದೂರ ಇರುವ ಬೂವನಹಳ್ಳಿ ಶಾಲೆಗೆ ವಿಲೀನವಾಗುವ ಕಾರಣ,

ಎಷ್ಟೋ ಪೋಷಕರು ತಮ್ಮ ಮಕ್ಕಳನ್ನು ದೂರದೂರಿಗೆ ಕಳುಹಿಸಲು ಆತಂಕದಲ್ಲಿದ್ದಾರೆ ಎಂದು ಹೇಳಿದರು. ಶಿಕ್ಷಣ ಸಾರ್ವತ್ರಿಕವಾಗಿರಬೇಕು ಮತ್ತು ಎಷ್ಟೇ ಸಂಖ್ಯೆಯಿದ್ದರೂ, ಎಲ್ಲರನ್ನೂ ತಲುಪುವಂತೆ ಇರಬೇಕು ಎಂದು ಮಹಾತ್ಮ ಜ್ಯೋತಿಬಾ ಫುಲೆ ಅವರು ಬಲವಾಗಿ ಪ್ರತಿಪಾದಿಸಿದ್ದರು.

ಅಜ್ಞಾನದ ಅಂಧಕಾರ ಹೊಡೆದೋಡಿಸಲು ಮಹಿಳೆ ಮತ್ತು ದಲಿತರಿಗೆ ಜ್ಞಾನದ ಬೆಳಕನ್ನು ನೀಡಲು ಅವರು ಶಾಲೆಗಳನ್ನು ಆರಂಭಿಸಿದರು.


ಕೇವಲ ಶಿಕ್ಷಣದಿಂದ ಮಾತ್ರವೇ ಮನುಷ್ಯರು ವಿಮರ್ಶಾತ್ಮಕ ಧೋರಣೆ ಮತ್ತು ಆತ್ಮಸಮ್ಮಾನ ಹೊಂದಲು ಸಾಧ್ಯ ಎಂಬುದನ್ನು ಜ್ಯೋತಿಬಾ ನಂಬಿದ್ದರು.

ಆದರೆ ಇಂದಿನ ಸರ್ಕಾರಗಳು ನಮ್ಮ ಎಲ್ಲಾ ಮಹನೀಯರ ಆಸೆಗಳನ್ನು ಗಾಳಿಗೆ ತೂರಿ ಇಂದು ವಿವಿಧ ಹೆಸರುಗಳ ಅಡಿಯಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿವೆ. ಇದೆಂತಹ ವಿಪರ್ಯಾಸ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷೆ ಚಂದ್ರಕಲಾ, ಜಿಲ್ಲಾ ಸಹ ಸಂಚಾಲಕಿ ಸುಷ್ಮಾ, ಕಾರ್ಯಕರ್ತರಾದ ರಂಗನಾಥ್, ತರುಣ್ ಹಾಗೂ ರಾಜಘಟ್ಟದ ಗ್ರಾಮಸ್ಥರಾದ ಧರ್ಮಪಾಲ, ಪುರುಷೋತ್ತಮ್, ರಮೇಶ್, ಗಂಗಾಧರ್, ಕಮಲಮ್ಮ, ಗಿರೀಶ, ಆ ಶಾಲೆಯ ವಿದ್ಯಾರ್ಥಿಗಳು ಹಾಗೂ ಮುಂತಾದವರು ಭಾಗವಹಿಸಿದ್ದರು.

## ಲಾರಿ ಎಫ್‌ಸಿ ಹೆಚ್ಚಳ ಖಂಡಿಸಿ ಲಾರಿ ಮಾಲೀಕರ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಕೇಂದ್ರ ಸರ್ಕಾರವು ಲಾರಿಗಳ ಎಫ್‌ಸಿ ಶುಲ್ಕ ಹೆಚ್ಚಳ ಮಾಡಿರುವುದನ್ನು ಖಂಡಿಸಿ ಹಾಸನ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಶನಿವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಸರ್ಕಾರ ನ.17 ರಿಂದ ಲಾರಿಗಳ ಫಿಟ್ನೆಸ್ ಸರ್ಟಿಫಿಕೇಟ್ (ಎಫ್.ಸಿ) ಶುಲ್ಕವನ್ನು ಹೆಚ್ಚಳಗೊಳಿಸಿದೆ. ಹೆಚ್ಚುವರಿ ಶುಲ್ಕವನ್ನು ಪಾವತಿಸಲು ಲಾರಿ ಮಾಲೀಕರಿಗೆ ಅಸಾಧ್ಯವಾಗಿದ್ದು, ಶುಲ್ಕ ಹೆಚ್ಚಳದಿಂದ ಲಾರಿ ಮಾಲೀಕರಿಗೆ ತೀವ್ರ ತೊಂದರೆಯಾಗಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸದ್ಯದ ಪರಿಸ್ಥಿತಿಯಲ್ಲಿ ದೈನಂದಿನ ಜೀವನ ಸಾಗಿಸಲು ಬೇಕಾಗಿರುವ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿರುವುದರಿಂದ ಈಗ ಕೇಂದ್ರ ಸರ್ಕಾರವು ಹೆಚ್ಚಳಗೊಳಿಸಿರುವ ಶುಲ್ಕ ಭರಿಸಲು ಲಾರಿ ಮಾಲೀಕರಿಗೆ ಸಾಧ್ಯವಾಗದೇ ಇರುವ ಕಾರಣ, ಈ ಹಿಂದೆ ಇದ್ದ ಶುಲ್ಕವನ್ನೇ ಮುಂದುವರೆಸಬೇಕು ಎಂದು ಒತ್ತಾಯಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ ಸುರೇಶ್ ಕೆ.ಕೆ., ಉಪಾಧ್ಯಕ್ಷ ಶೇಕ್ ಅಹಮ್ಮದ್, ನಿರ್ದೇಶಕ ಮಂಜುನಾಥ್ ಸೇರಿದಂತೆ ಲಾರಿ ಮಾಲೀಕರು ಹಾಗೂ ಚಾಲಕರು ಇದ್ದರು.

## ಮಾರ್ಗಸೂಚಿ ಫಲಕಗಳಿಂದ ಪ್ರವಾಸಿಗರಿಗೆ ಅನುಕೂಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಚನ್ನರಾಯಪಟ್ಟಣ: ಐತಿಹಾಸಿಕ ತಾಣದಲ್ಲಿರುವ ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ಹಾಗೂ ಶ್ರೀ ಸದಾಶಿವಸ್ವಾಮಿ ದೇವಾಲಯಕ್ಕೆ ಆಗಮಿಸುವ ಪ್ರವಾಸಿಗರ ಅನುಕೂಲಕ್ಕಾಗಿ ಗ್ರಾಮ ಪಂಚಾಯಿತಿ ವತಿಯಿಂದ ನಾಮಫಲಕವನ್ನು ಅಳವಡಿಸಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣರು ಹೇಳಿದರು.

ತಾಲೂಕಿನ ನುಗ್ಗೆಹಳ್ಳಿ ಗ್ರಾಮದಲ್ಲಿ ಗ್ರಾಪಂ ವತಿಯಿಂದ ಪ್ರಮುಖ 03 ರಸ್ತೆಗಳಲ್ಲಿ ಅಳವಡಿಸಲಾಗಿದ್ದ ನಾಮ ಫಲಕ ಅನಾವರಣಗೊಳಿಸಿ ಮಾತನಾಡಿದರು.

ಗ್ರಾಮದಲ್ಲಿರುವ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ಹಾಗೂ ಶ್ರೀ ಸದಾಶಿವ ಸ್ವಾಮಿ ದೇವಾಲಯಗಳು ಹೊಯ್ಸಳರ ಶಿಲ್ಪ ಕಲೆಗಳನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ಹೊರ ರಾಜ್ಯಗಳಿಂದಲೂ ದಿನನಿತ್ಯ ನೂರಾರು ಪ್ರವಾಸಿಗರು ಹಾಗೂ ಭಕ್ತರು ದೇವಾಲಯಕ್ಕೆ ಆಗಮಿಸುತ್ತಾರೆ ಎಂದರು.

ಇದುವರೆಗೂ ದೇವಾಲಯ ಮಾರ್ಗ ಸೂಚಿಸುವ ನಾಮಫಲಕ ಇರಲಿಲ್ಲ. ಭಕ್ತರಿಗೆ ಅನುಕೂಲವಾಗುವ ದೃಷ್ಟಿಯಿಂದ ಸ್ಥಳೀಯ ಗ್ರಾಮ ಪಂಚಾಯಿತಿ ವತಿಯಿಂದ ಹೊಸದಾಗಿ ನಾಮ ಫಲಕವನ್ನು ಅಳವಡಿಸಲಾಗಿದೆ. ಇದರಿಂದ ಮುಂಬರುವ ದಿನಗಳಲ್ಲಿ ಪ್ರವಾಸಿಗರು ಹಾಗೂ ಭಕ್ತರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ದೇವಾಲಯದ ನಾಮಫಲಕದ ಜೊತೆಗೆ ಜಿಲ್ಲಾ ಕೇಂದ್ರ ಹಾಗೂ ತಾಲೂಕು ಕೇಂದ್ರಗಳ ಹೆಸರು ಮತ್ತು ಕಿಲೋಮೀಟರ್ ಅನ್ನು ನಾಮಪಲಕದಲ್ಲಿ ಅಳವಡಿಸಿರುವುದು. ಈ ಭಾಗದಲ್ಲಿ ಓಡಾಡುವ ವಾಹನ ಸವಾರರಿಗೆ ಮಾಹಿತಿ ತಿಳಿಯಲಿದೆ ಎಂದರು.

ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ಮತ್ತು ಸದಾಶಿವ ಸ್ವಾಮಿ ದೇವಾಲಯಗಳ ಮಾರ್ಗದ ರಸ್ತೆ ಸಂಪೂರ್ಣ ಆಳಾಗಿದ್ದು ಈ ಬಗ್ಗೆ ಪ್ರವಾಸೋದ್ಯಮ ಇಲಾಖೆ ಸಚಿವರಿಗೆ ಮನವಿ ಮಾಡುವ ಮೂಲಕ ರಸ್ತೆ ಅಭಿವೃದ್ಧಿ ಜೊತೆಗೆ ಶೌಚಾಲಯ ಸೇರಿದಂತೆ ಇತರೆ ಮೂಲಭೂತ ಸೌಕರ್ಯ ಕಲ್ಪಿಸಲು ಹೆಚ್ಚಿನ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಹೊನ್ನೇಗೌಡ, ಉದ್ಯಮಿ ಅಣತಿ ಯೋಗೇಶ್, ಗ್ರಾಪಂ ಸದಸ್ಯರಾದ ನಟರಾಜ್ ಯಾದವ್, ಎನ್ ಎಸ್ ಮಂಜುನಾಥ್, ಶಿವಕುಮಾರ್, ಮುಖಂಡರಾದ ದೊರೆಸ್ವಾಮಿ, ಮುರಳಿ, ಬಸವನಪುರ ಪ್ರಕಾಶ್, ಹುಲಿಕೆರೆ ಸಂಪತ್ ಕುಮಾರ್, ಜೈ ಕೀರ್ತಿ, ಮಧು, ಚಂದ್ರು ಯಾದವ್, ಜೆಸಿಬಿ ಶೇಖರ್, ಸೇರಿದಂತೆ ಇತರರು ಹಾಜರಿದ್ದರು.

## ಕಾರ್ಮಿಕರ ಶ್ರಮದಿಂದ ದೇಶದ ಅಭಿವೃದ್ಧಿ ಸಾಧ್ಯ

### ಸಕಲೇಶಪುರದಲ್ಲಿ ಬ್ರಿಡ್ಜ್ ಕೋರ್ಸ್ ತರಬೇತಿ-ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ : ದೇಶ ಅಭಿವದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸಾಲಿನಲ್ಲಿ ಸೇರ್ಪಡೆಯಾಗಲು ಕಾರ್ಮಿಕರ ಶ್ರಮವೇ ಕಾರಣವಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಶುಕ್ರವಾರ ಪಟ್ಟಣದ ಪುರ ಭವನದಲ್ಲಿ ಏರ್ಪಡಿಸಿದ ಬ್ರಿಡ್ಜ್ ಕೋರ್ಸ್ ತರಬೇತಿ ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಸುರಕ್ಷತಾ ಕಿಟ್ ವಿತರಿಸಿ ಮಾತನಾಡಿದರು.

ದೇಶದ ಆರ್ಥಿಕ ಅಭಿವದ್ಧಿಯಲ್ಲಿ ಕಾರ್ಮಿಕರ ಶ್ರಮ ನಿರ್ಣಾಯಕ ಪಾತ್ರ ವಹಿಸುತ್ತದೆ. ಇಂತಹ ಕಾರ್ಮಿಕರ ನೆರವಿಗಾಗಿ ಹಲವು ಕಾನೂನುಗಳನ್ನು ರಚಿಸಲಾಗಿದ್ದು ಕರ್ತವ್ಯ ನಿರ್ವಹಣೆ ಸಮಯದಲ್ಲಿ ಸಂಭವಿಸುವ ಅವಘಡಗಳು ಹಾಗೂ ಕಾರ್ಮಿಕರ ಉದ್ಯೋಗ ಭದ್ರತೆಯಲ್ಲಿ ಕಾನೂನುಗಳು ಕಾರ್ಮಿಕರಿಗೆ ನೆರವಾಗಲಿವೆ ಎಂದರು.

ದೇಶದ ಅಭಿವೃದ್ಧಿಯಲ್ಲಿ ಕಾರ್ಮಿಕರ ಪಾತ್ರ ಅನನ್ಯವಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರಗಳು ಕಾರ್ಮಿಕರ ಅಭಿವೃದ್ಧಿಗೆ ಸಾಕಷ್ಟು ಯೋಜನೆಗಳನ್ನು ರೂಪಿಸಿದೆ. ಪಿಂಚಣಿ, ಟೂಲ್ ಕಿಟ್, ಮಹಿಳೆಯರಿಗೆ ಹೆರಿಗೆ ಸೌಲಭ್ಯ, ವಿವಾಹ ಹಾಗೂ ಅಂತ್ಯಕ್ರಿಯೆ ವೆಚ್ಚ, ಶೈಕ್ಷಣಿಕ ಸಹಾಯಧನ ವೈದ್ಯಕೀಯ ಸಹಾಯಧನ ಅಪಘಾತ ಪರಿಹಾರ ಸೌಲಭ್ಯ ಒದಗಿಸಲಾಗುತ್ತಿದೆ.ಅಸಂಘಟಿತ ಕಾರ್ಮಿಕರು ತಮ್ಮ ಹಕ್ಕುಗಳನ್ನು ಪಡೆಯಲು ಜಾಗೃತರಾಗಬೇಕು. ಸರ್ಕಾರ ನಿಮ್ಮ ಶ್ರೇಯೋಭಿವೃದ್ಧಿಗಾಗಿ ಜಾರಿಗೊಳಿಸಿರುವ? ಯೋಜನೆಗಳ ಪ್ರಯೋಜನ ಪಡೆಯಿರಿ ಎಂದು ಕಿವಿಮಾತು ಹೇಳಿದರು.

ಆರೋಗ್ಯ, ಮದುವೆ, ಹೆರಿಗೆ, ಮಕ್ಕಳಿಗೆ ಶಿಕ್ಷಣ, ವೈದ್ಯಕೀಯ ನೆರವು ಸೇರಿ ಎಲ್ಲ ಹಂತದಲ್ಲೂ ಸರ್ಕಾರಗಳು ಕಾರ್ಮಿಕರ ಬೆನ್ನಿಗೆ ನಿಂತಿದೆ. ಕಟ್ಟಡ ಕಾರ್ಮಿಕರು ಶ್ರಮಜೀವಿಗಳಾಗಿದ್ದು, ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸುವ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು. ಶಿಕ್ಷಣವನ್ನೇ ಅವರಿಗೆ ಸಂಪತ್ತನ್ನಾಗಿ ನೀಡಬೇಕು ಎಂದರು. ಕಾರ್ಮಿಕರು ದುಶ್ಚಟಗಳಿಗೆ ಬಲಿಯಾಗದೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಯಮುನಾ ಮಾತನಾಡಿ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಕಾರ್ಮಿಕರಿಗೆ ದೊರಕುವ ಸೌಲಭ್ಯಗಳ ಕುರಿತು ಮಾಹಿತಿ ಒದಗಿಸಿದರು.

ಈ ಸಂಧರ್ಭದಲ್ಲಿ ಅನಿಕೇತನ ಸಂಸ್ಥೆ ಮುಖ್ಯಸ್ಥರಾದ ಕಾರ್ತೀಕ್, ಆಲೂರು ಹಿರಿಯ ಕಾರ್ಮಿಕ ನಿರೀಕ್ಷಕ ಆನಂದ್ ರಾಮ್, ತಾಲೂಕು ಹಿರಿಯ ಕಾರ್ಮಿಕ ನಿರೀಕ್ಷಕ ರಘು, ಇಲಾಖೆಯ ಜಯರಾಮ್ ಉಪಸ್ಥಿತರಿದ್ದರು.

## ವಿಶೇಷ ಪ್ರಶಸ್ತಿಗೆ ಬಹುಮುಖ ಪ್ರತಿಭೆಯ ಅನುವಾದಕ ಜೆ.ವಿ. ಕಾರ್ಲೋ ಭಾಜನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ವಿವಿಧ ಭಾಷೆಯ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ತಮ್ಮ ಮಾತೃ ಭಾಷೆ ಕೊಂಕಣಿ ಹಾಗೂ ಕನ್ನಡಕ್ಕೆ ಅನುವಾದಿಸುವ ಮೂಲಕ ಸಾಹಿತ್ಯಾಸಕ್ತರ ಮನೆ ಮಾತಾಗಿರುವ ಜೆ.ವಿ.ಕಾರ್ಲೋ ಅವರಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ 2025ನೇ ಸಾಲಿನ ಗೌರವ ಪ್ರಶಸ್ತಿ ಪ್ರಾಪ್ತವಾಗಿದೆ. ಇವರೊಂದಿಗೆ ರಾಜ್ಯದ ಇನ್ನಿತರ ನಾಲ್ವರು ಅನುವಾದಕರು ಈ ಪ್ರಶಸ್ತಿಗಾಗಿ ಆಯ್ಕೆಯಾಗಿದ್ದಾರೆ.

ಪ್ರಾಧಿಕಾರಿದ ಅಧ್ಯಕ್ಷ ಚನ್ನಪ್ಪ ಕಟ್ಟಿ ಅವರು ಪ್ರಶಸ್ತಿ ಪಟ್ಟಿಯನ್ನು ಬಿಡುಗಡೆಗೊಳಿಸಿದ್ದು, ಕನ್ನಡ ಹಾಗೂ ಇತರ ಭಾಷೆಗಳ ನಡುವೆ ಅನುವಾದಕ್ಕೆ ಸಂಬಂಧಿಸಿ ಈ ಆಯ್ಕೆ ಮಾಡಲಾಗದೆ. ಅಂತೆಯೇ ವಿವಿಧ ಇಂಗ್ಲಿಷ್ ಕೃತಿಗಳನ್ನು ಕನ್ನಡ ಹಾಗೂ ಕೊಂಕಣಿ ಭಾಷೆಗೆ ಅನುವಾದಿಸಿರುವ ಹಾಸನದ ಜೆ.ವಿ. ಕಾರ್ಲೋ, ಕನ್ನಡ ಹಾಗೂ ಇಂಗ್ಲಿಷ್ ನಡುವೆ ಅನೇಕ ಕೃತಿಗಳನ್ನು ಅನುವಾದಿಸಿರುವ ಬೆಂಗಳೂರಿನ ವನಮಾಲಾ ವಿಶ್ವನಾಥ್, ಜಾನಪದ ಹಾಗೂ ಅನುವಾದ ಕ್ಷೇತ್ರದಲ್ಲಿ ಹೆಸರಾಗಿರುವ ಚಿತ್ರದುರ್ಗದ ಸಂಧ್ಯಾರೆಡ್ಡಿ, ಮರಾಠಿ ಹಾಗೂ ಮಲಯಾಳಂನಿಂದ ಕನ್ನಡಕ್ಕೆ ಅನೇಕ ಕೃತಿಗಳನ್ನು ಅನುವಾದಿಸಿರುವ ಹೊಸಪೇಟೆಯ ವಿಠಲರಾವ್ ಟಿ.ಗಾಯಕ್ವಾಡ್ ಹಾಗೂ ಮರಾಠಿಯಲ್ಲಿ ರಚಿತವಾದ ಸಮಾಜ ಸುಧಾರಕ ಮತ್ತು ಹೋರಾಟಗಾರರ ಕುರಿತಾದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ಅಥಣಿಯ ಜೆ.ಪಿ.ದೊಡಮನಿ ಅವರು ಈ ಪ್ರಶಸ್ತಿಗೆ ಆಯಕೆಯಾಗಿದ್ದಾರೆ. ಜೆ.ವಿ.ಕಾರ್ಲೋ ಅವರು ಹೆಸರಾಂತ ಅನುವಾದಕರು, ಸಾಹಿತಿಗಳು ಮತ್ತು ವೃತ್ತಿಯಲ್ಲಿ ನಿರ್ಮಾಣಕಾರರು ಆಗಿದ್ದಾರೆ. ಅವರ ಬಹುಮುಖ ಪ್ರತಿಭೆ ಮತ್ತು ಸಾಹಿತ್ಯಕ್ಕೆ, ವಿಶೇಷವಾಗಿ ಅನುವಾದ ಕ್ಷೇತ್ರಕ್ಕೆ ನೀಡಿರುವ ಗಮನಾರ್ಹ ಕೊಡುಗೆಯನ್ನು ನೀಡಿದ್ದಾರೆ.

ಅವರು 1952ರ ಡಿ.17 ರಂದು ಜನಿಸಿದರು. ಅವರ ಶೈಕ್ಷಣಿಕ ಪಯಣವು ಹಾಸನದಲ್ಲಿ ಪ್ರಾರಂಭವಾಯಿತು. ಹಾಸನದ ಸಂತ ಜೋಸೆಫರ ಶಾಲೆಯಲ್ಲಿ ಹೈಸ್ಕೂಲ್ ಶಿಕ್ಷಣವನ್ನು ಪೂರೈಸಿದರು. ನಂತರ, ಉನ್ನತ ಶಿಕ್ಷಣಕ್ಕಾಗಿ ಹಾಸನದ ಸರ್ಕಾರಿ ಪದವಿ ಕಾಲೇಜುಗೆ ಸೇರಿ ಬಿ.ಎ. ಪದವಿಯನ್ನು ಪಡೆದರು.

ಶಿಕ್ಷಣದ ನಂತರ, ಅವರು ವೃತ್ತಿಜೀವನವನ್ನು ನಿರ್ಮಾಣ ಕ್ಷೇತ್ರದಲ್ಲಿ ಕಂಡುಕೊಂಡರು. ಹೆಸರಾಂತ ಕಲಾವಿದ ಮತ್ತು ಆರ್ಕಿಟೆಕ್ಟ್ ಕೆ.ಟಿ. ಶಿವಪ್ರಸಾದರ ಮಾರ್ಗದರ್ಶನದಲ್ಲಿ ಅವರು ವಿನ್ಯಾಸಗೊಳಿಸಿದ ಮನೆಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡರು. ಅವರ ಸಾಹಿತ್ಯಿಕ ಆಸಕ್ತಿಯು ಕಾಲೇಜು ದಿನಗಳಲ್ಲೇ ಮೊಳಕೆಯೊಡೆಯಿತು. ಅವರ ಮೊಟ್ಟ ಮೊದಲ ಸ್ವಂತ ಕಥೆ ಟಿಹ್ಯಾಪ್ಪಿ ಕ್ರಿಸ್ಮಸ್ಟಿ ಕನ್ನಡಪ್ರಭ ಪತ್ರಿಕೆಯ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ನಂತರ, ಟಿಮಳೆಟಿ ಎಂಬ ಮತ್ತೊಂದು ಕಥೆ ಟಿಮಲ್ಲಿಗೆಟಿ ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಯಿತು. ನಂತರ ಅವರು ಮೂಲ ಬರವಣಿಗೆಗಿಂತ ಹೆಚ್ಚಾಗಿ ಓದಿನ ಕಡೆಗೆ, ವಿಶೇಷವಾಗಿ ಇಂಗ್ಲಿಷ್ ಸಾಹಿತ್ಯದ ಕಡೆಗೆ ಹೆಚ್ಚು ಗಮನ ಹರಿಸಿದರು. ಕಾರ್ಲೋ ಅವರ ಸಾಹಿತ್ಯಕ ಜೀವನದಲ್ಲಿ ಮಹತ್ವದ ತಿರುವು ನೀಡಿದ್ದು ಅನುವಾದ ಕ್ಷೇತ್ರ. ವಿವಿಧ ಭಾಷೆಗಳ ಶ್ರೇಷ್ಠ ಕೃತಿಗಳನ್ನು ತಮ್ಮ ಮಾತೃಭಾಷೆ ಮತ್ತು ಕನ್ನಡಕ್ಕೆ ಪರಿಚಯಿಸುವ ಮೂಲಕ ಅವರು ಅನುವಾದಕರಾಗಿ ಗಣನೀಯ ಸಾಧನೆ ಮಾಡಿದರು. ಕಾರ್ಲೋ ಅವರು ತಮ್ಮ ಮಾತೃಭಾಷೆ ಕೊಂಕಣಿಗೆ ನೀಡಿದ ಕೊಡುಗೆ ಸ್ಮರಣೀಯ. ಕಾಲೇಜು ದಿನಗಳಲ್ಲೇ ಅಮೆರಿಕನ್ ಲೇಖಕ ಮಾರ್ಕ್ ಟ್ವೇನ್‌ನ ಜನಪ್ರಿಯ ಕಾದಂಬರಿ ದಿ ಅಡ್ವೆಂಚರ್ಸ್ ಆಫ್ ಟೊಮ್ ಸಾಯರ್ ಅನ್ನು ಕೊಂಕಣಿಗೆ ಅನುವಾದಿಸಿದರು. ಇದು ಕೊಂಕಣಿಯ ರಾಕ್ಣೊ ಸಾಪ್ತಾಹಿಕ ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾಯಿತು.

ನಂತರ, ಬ್ರೆಜಿಲ್‌ನ ಖ್ಯಾತ ಲೇಖಕ ಪಾಮ್ಲೊ ಕುಯೆಲ್ಲೊ ಅವರ ದಿ ಅಲ್ಕೆಮಿಸ್ಟ್ ಮತ್ತು ಆಸ್ಟ್ರೇಲಿಯನ್ ಲೇಖಕ ಮೊರಿಸ್ ವೆಸ್ಟ್ ಅವರ ದಿ ಡೆವಿಲ್ಸ್ ಅಡ್ವೋಕೇಟ್ ಕಾದಂಬರಿಗಳು ಸಹ ಕೊಂಕಣಿಯಲ್ಲಿ ಧಾರವಾಹಿಯಾಗಿ ಪ್ರಕಟಗೊಂಡವು. ಅಷ್ಟೇ ಅಲ್ಲದೆ, ಅವರ ನೂರಕ್ಕೂ ಹೆಚ್ಚು ಅನುವಾದಿತ ಕತೆಗಳು ಮತ್ತು ನೀಳ್ಗತೆಗಳು ಕೊಂಕಣಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಅವರ ಕೊಂಕಣಿ ಅನುವಾದಿತ ಪುಸ್ತಕಗಳ ಪೈಕಿ, ಪಾಸ್ಕಲ್ ಅಲನ್ ನಜ್ರೆತ್ ಅವರ ಗಾಂಧಿಸ್ ಔಟ್ಸ್ಟ್ಯಾಂಡಿಂಗ್ ಲೀಡರ್ಶಿಫ್ಟಿ ಪುಸ್ತಕದ ಅನುವಾದಕ್ಕಾಗಿ ಅವರಿಗೆ 2014 ರಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರಕಿದೆ. ಹಾಗೆಯೇ, ಕೊಂಕಣಿ ಸಾಹಿತ್ಯ ಅಕಾಡೆಮಿಯ ವತಿಯಿಂದ ಅವರ ಇಂಗ್ಲಿಷ್ ಸಣ್ಣ ಕತೆಗಳ ಅನುವಾದ ಸಂಕಲನ ಅಪಹರಣ್ ಪ್ರಕಟವಾಗಿದೆ. ಜೆ.ವಿ.ಕಾರ್ಲೋ ಅವರು ಕೇವಲ ಒಬ್ಬ ವೃತ್ತಿಪರ ನಿರ್ಮಾಣಕಾರರಾಗಿರದೆ, ತಮ್ಮ ನಿರಂತರ ಓದು ಮತ್ತು ಅನುವಾದದ ಮೂಲಕ ಕನ್ನಡ ಮತ್ತು ಕೊಂಕಣಿ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ ಸಾರಸ್ವತ ಲೋಕದ ಮಹತ್ವದ ವ್ಯಕ್ತಿ. ಸಾಹಿತ್ಯದ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಾ, ಪಾಶ್ಚಾತ್ಯ ಶ್ರೇಷ್ಠ ಕೃತಿಗಳನ್ನು ಭಾರತೀಯ ಓದುಗರಿಗೆ ಪರಿಚಯಿಸುವಲ್ಲಿ ಅವರ ಪಾತ್ರ ಅಮೂಲ್ಯವಾಗಿದೆ. ಅವರ ಅನುವಾದ ಕಾರ್ಯವು ಮುಂದುವರೆದಿದ್ದು, ಕನ್ನಡ ಸಾಹಿತ್ಯ ಲೋಕಕ್ಕೆ ಮತ್ತಷ್ಟು ಅನನ್ಯ ಕೃತಿಗಳನ್ನು ಕೊಡುಗೆ ನೀಡುವ ನಿರೀಕ್ಷೆಯಿದೆ.

### ಕನ್ನಡಕ್ಕೆ ಕಾರ್ಲೋ ಕೊಡುಗೆ ಅಪಾರ

ಕೊಂಕಣಿಯಷ್ಟೇ ಮಹತ್ವದ ಕೊಡುಗೆಯನ್ನು ಕಾರ್ಲೊ ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಅವರ ಐವತ್ತಕ್ಕೂ ಹೆಚ್ಚು ಇಂಗ್ಲಿಷ್ ಅನುವಾದಿತ ಕತೆಗಳು ಕನ್ನಡದ ವಿವಿಧ ಪತ್ರಿಕೆಗಳು ಮತ್ತು ಅಂತರ್ಜಾಲ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ 2014, 2015 ಮತ್ತು 2020ರ ಅನುವಾದಿತ ಕಥಾಸರಣಿಗಳಲ್ಲಿ ಅವರ ನಾಲ್ಕು ಅನುವಾದಿತ ಕತೆಗಳು ಪ್ರಕಟವಾಗಿವೆ. ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿಯೂ ಅವರು ಕೆಲಸ ಮಾಡಿದ್ದು, ಬೆಂಗಳೂರಿನ ಪ್ರಥಮ್ ಬುಕ್ಸ್ ಸಂಸ್ಥೆಗಾಗಿ ಸುಮಾರು ಹದಿನೈದು ಇಂಗ್ಲಿಷ್ ಸಚಿತ್ರ ಮಕ್ಕಳ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಹಾಗೆಯೇ, ಬಹುರೂಪಿ ವಿವಿಡ್ಲಿಪಿ ಪ್ರಕಾಶನಕ್ಕಾಗಿ ಗುಜ್ಜಾರ್ ಅವರ ಸಚಿತ್ರ ಗಾಂಧಿ ಪುಸ್ತಕವನ್ನು ಕನ್ನಡದಲ್ಲಿ ಅನುವಾದಿಸಿದ್ದಾರೆ.

### ಇತ್ತೀಚಿನ ಪ್ರಕಟಣೆಗಳು ಮತ್ತು ಪ್ರಸ್ತುತ ಕಾರ್ಯ

ಕಾರ್ಲೊ ಅವರ ಇತ್ತೀಚಿನ ಅನುವಾದಿತ ಕೃತಿಗಳು ಗಮನಾರ್ಹ. 2024ರಲ್ಲಿ ಅವರ ಜಾಕ್ ಲಂಡನ್‌ನ ದಿ ಕಾಲ್ ಆಫ್ ದಿ ವೈಲ್ಡ್ಟಿ(ಅದೇ ಹೆಸರಿನಲ್ಲಿ). ರೋಆಲ್ಡ್ ದಾಹ್ಲ್‌ನ ಅನೀರಿಕ್ಷಿತ ಕತೆಗಳು ಎಂಬ ಎರಡು ಪ್ರಮುಖ ಪುಸ್ತಕಗಳು ಸೃಷ್ಟಿ ಪ್ರಕಾಶನ, ಬೆಂಗಳೂರು ಅವರಿಂದ ಪ್ರಕಟವಾಗಿವೆ. 2025ರಲ್ಲಿ, ರೋಆಲ್ಡ್ ದಾಹ್ಲ್‌ನ ಮತ್ತೊಂದು ಕಥಾಸಂಕಲನ ಇಲಿ ಮನುಷ್ಯ ಸಹ ಸೃಷ್ಟಿ ಪ್ರಕಾಶನದಿಂದ ಹೊರಬಂದಿದೆ.

ಸದ್ಯದಲ್ಲಿಯೇ, ಪ್ರಥಮ್ ಬುಕ್ಸ್ ವತಿಯಿಂದ ಪುಟ್ಟ ರಾಜಕುಮಾರ ಎಂಬ ಅನುವಾದಿತ ಮಕ್ಕಳ ಪುಸ್ತಕ ಬಿಡುಗಡೆಗೆ ಸಿದ್ಧವಾಗಿದೆ. ಅವರು ಪ್ರಸ್ತುತ ಜೇಮ್ಸ್ ಕ್ಲ್ಯಾವೆಲ್ ಎಂಬ ಲೇಖಕರ ಎರಡನೇ ಮಹಾಯುದ್ಧಕ್ಕೆ ಸಂಬಂಧಿಸಿದ ಕಿಂಗ್ ರ್ಯಾಟ್ ಎಂಬ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

## ಅಂಕ ಗಳಿಕೆಯಷ್ಟೇ ವಿದ್ಯಾರ್ಥಿಗಳ ಉದ್ದೇಶವಾಗಬಾರದು: ಬಲರಾಮ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಶಾಲಾ ಶಿಕ್ಷಣದಲ್ಲಿ ಪಾಠ, ಪುಸ್ತಕದ ಜ್ಞಾನ ಮಾತ್ರ ಸಾಕಾಗುವುದಿಲ್ಲ. ಮಕ್ಕಳ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಕ್ರೀಡೆಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕೇವಲ ಅಂಕಗಳ ಮೇಲೆ ಕೇಂದ್ರೀಕರಿಸಿದರೆ ಅವರ ದೈಹಿಕ, ಮಾನಸಿಕ ಬೆಳವಣಿಗೆ ಸಂಪೂರ್ಣವಾಗುವುದಿಲ್ಲ ಎಂದು ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೆ.ಎನ್ ಬಲರಾಮ ತಿಳಿಸಿದರು.

ನಗರದ ರಾಜೀವ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ರಾಜೀವ್ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಡಾ.ವಿ.ರಾಜೀವ್ ಸ್ಮರಣಾರ್ಥ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ಅಂತರ ಜಿಲ್ಲಾ ಪ್ರೌಢಶಾಲಾ ಮಟ್ಟದ ಕ್ರೀಡಾ ಸ್ಪರ್ಧೆ ರಾಜೀವ್ ಇನ್‌ಸ್ಪೈರ್ 2025 ಉದ್ಘಾಟಿಸಿ ಮಾತನಾಡಿದರು.

ಕ್ರೀಡೆಗಳು ದೈಹಿಕ ಆರೋಗ್ಯ ಹೆಚ್ಚಿಸುತ್ತವೆ. ಮಾನಸಿಕ ಶಕ್ತಿ ಹಾಗೂ ಒತ್ತಡ ನಿರ್ವಹಣೆ, ಶಿಸ್ತು, ನಾಯಕತ್ವ, ಹೊಣೆಗಾರಿಕೆ ಕಲಿಸುತ್ತವೆ. ಜಯ, ಪರಾಜಯವನ್ನು ಸಮನಾಗಿ ಸ್ವೀಕರಿಸುವ ಮನೋಭಾವ ನೀಡುತ್ತವೆ. ಗೆಲುವು ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ನೀಡಿದರೆ, ಸೋಲು ಪುನಃ ಪ್ರಯತ್ನಿಸುವ ಮನೋಬಲ ಬೆಳೆಸುತ್ತದೆ. ಆದ್ದರಿಂದ ಕ್ರೀಡೆಗಳು ಕೇವಲ ಆಟವಲ್ಲ. ಅದು ಜೀವನ ಪಾಠ ಕಲಿಸುವ ಒಂದು ಮಹಾಪಾಠ ಶಾಲೆ ಎಂದು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜೀವ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ಬಿಎನ್. ರತ್ನ ಮಾತನಾಡಿ, ಕ್ರೀಡೆ ಎಂದರೆ ತಂಡವಾಗಿ ಕೆಲಸ ಮಾಡುವುದು. ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವುದು. ಸೋಲಿನಲ್ಲೂ ನಿಲ್ಲುವ ಧೈರ್ಯ, ಗೆಲುವಿನಲ್ಲಿ ವಿನಯ. ಈ ಗುಣಗಳು ವಿದ್ಯಾರ್ಥಿಗಳಿಗೆ ಅವರ ಭವಿಷ್ಯದ ಬದುಕಿನಲ್ಲಿ ಶಿಕ್ಷಣ, ಉದ್ಯೋಗ, ಜೀವನ ನಿರ್ವಹಣೆಯಲ್ಲಿ ಅತ್ಯಗತ್ಯ. ಇವೆಲ್ಲವನ್ನೂ ಕಲಿಸುವ ಶಿಕ್ಷಕ ಕ್ರೀಡೆ ಎಂದು ಸ್ಫೂರ್ತಿದಾಯಕ ಮಾತುಗಳನ್ನು ಹೇಳಿದರು.

ಪ್ರಾಂಶುಪಾಲ ಡಾ. ಎಂ.ಆರ್. ಶಂಕರೇಗೌಡ ಮಾತನಾಡಿ, ಹೈಸ್ಕೂಲ್ ಹಂತ ಮಕ್ಕಳ ವ್ಯಕ್ತಿತ್ವ ರೂಪುಗೊಳ್ಳುವ ಅತ್ಯಂತ ಸೂಕ್ಷ್ಮ ಮತ್ತು ಮಹತ್ವದ ಹಂತ. ಕ್ರೀಡಾಕೂಟ ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಜೀವನಶೈಲಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇಂದಿನ ಮಕ್ಕಳ ಜೀವನದಲ್ಲಿ ಮೊಬೈಲ್, ಟೀವಿ, ವೀಡಿಯೋ ಗೇಮ್‌ಗಳ ಮತ್ತು ಸಾಮಾಜಿಕ ಜಾಲತಾಣ ಪ್ರಭಾವ ಹೆಚ್ಚಿರುವ ಕಾಲದಲ್ಲಿ ಮೈದಾನಕ್ಕೆ ಬರುವ ಅಭ್ಯಾಸ ಬೆಳೆಸುವುದು ಅತ್ಯಂತ ಅಗತ್ಯ ಎಂದು ಹೇಳಿದರು.

ಜಿಲ್ಲೆಯ ಹಾಗೂ ಅಂತರ ಜಿಲ್ಲೆಯ ವಿವಿಧ ಭಾಗಗಳಿಂದ 32 ಪ್ರೌಢಶಾಲೆಗಳ ತಂಡಗಳು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದವು. ಬಾಲಕರ ವಾಲಿಬಾಲ್ ಪಂದ್ಯಾವಳಿಯಲ್ಲಿ 4ನೇ ಸ್ಥಾನ ಸರ್ಕಾರಿ ಜೂನಿಯರ್ ಕಾಲೇಜು ಶ್ರವಣಬೆಳಗೊಳ, ತೃತೀಯ ಸ್ಥಾನ ವಾಸವಿ ವಿದ್ಯಾಸಂಸ್ಥೆ, ಹೊಳೆನರಸೀಪುರ, ದ್ವಿತೀಯ ಸ್ಥಾನ ಕ್ರಿಸ್ತಜ್ಯೋತಿ ಶಾಲೆ ಅರಕಲಗೂಡು. ಪ್ರಥಮ ಸ್ಥಾನ ಮಂಗಳೂರು ಪಬ್ಲಿಕ್ ಶಾಲೆ, ಹಾಸನ ತಂಡಗಳು ಪಡೆದುಕೊಂಡವು.

ಬಾಲಕಿಯರ ಥ್ರೋಬಾಲ್ ಪಂದ್ಯಾವಳಿಯಲ್ಲಿ 4ನೇ ಸ್ಥಾನ ಸರ್ಕಾರಿ ಪ್ರೌಢಶಾಲೆ, ಕಟ್ಟಾಯ. ತೃತೀಯ ಸ್ಥಾನ ಶ್ರೀ ಭುವನೇಶ್ವರಿ ವಿದ್ಯಾಸಂಸ್ಥೆ ದುದ್ದ ಆರ್.ಎಸ್. ದ್ವಿತೀಯ ಸ್ಥಾನ ಕ್ರೈಸ್ಟ್ ಶಾಲೆ, ಹಾಸನ. ಪ್ರಥಮ ಸ್ಥಾನ ಶ್ರೀ ಆದರ್ಶ ಗ್ರಾಮೀಣ ಪ್ರೌಢಶಾಲೆ, ತಟ್ಟೆಕೆರೆ, ಹೊಳೆನರಸೀಪುರ ತಂಡಗಳು ಪಡೆದುಕೊಂಡವು, ವಿಜೇತ ಮತ್ತು ರನ್ನರ್ ಅಪ್ ತಂಡಗಳಿಗೆ ನಗದು ಬಹುಮಾನ, ಆಕರ್ಷಕ ಟ್ರೋಫಿ, ಪದಕ, ಪ್ರಮಾಣಪತ್ರ ವಿತರಿಸಲಾಯಿತು. ರಾಜೀವ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯೆ ಸಲೋಮಿ, ರತ್ನ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯೆ ಡಾ.ಎಂ. ಸೆಲ್ವಿ, ಕಾಲೇಜಿನ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಗಂಗರಾಜು, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥರಾದ ಚೈತ್ರ, ದೈಹಿಕ ಶಿಕ್ಷಣ ನಿರ್ದೇಶಕ ಉಮೇಶ್ ಬಿ.ಡಿ ಮತ್ತು ಗಣೇಶ್ ಹೆಚ್.ಎ ಇದ್ದರು.

# ಸಾಹಿತಿ ಎಸ್.ಎಲ್.ಭೈರಪ್ಪ ಹುಟ್ಟೂರ ಕೆರೆ ಭರ್ತಿ

## ಶಾಸಕ ಸಿ.ಎನ್.ಬಾಲಕೃಷ್ಣ ನೇತೃತ್ವದಲ್ಲಿ ಬಾಗಿನ ಅರ್ಪಣೆ । ದೇಗುಲ ಅಭಿವೃದ್ಧಿ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ದಿ. ಸಾಹಿತಿ ಎಸ್.ಎಲ್.ಭೈರಪ್ಪ ಅವರ ಹುಟ್ಟೂರು ಸಂತೆಶಿವರ ಕೆರೆ ದಶಕಗಳ ಬಳಿಕ ಭರ್ತಿಯಾದ ಹಿನ್ನಲೆಯಲ್ಲಿ ಶುಕ್ರವಾರ ಶಾಸಕ ಸಿ.ಎನ್.ಬಾಲಕೃಷ್ಣ ಹಾಗೂ ಭೈರಪ್ಪನವರ ಕಿರಿಯ ಪುತ್ರ ಉದಯಶಂಕರ್ ಬಾಗಿನ ಅರ್ಪಿಸಿದರು.

ತವರ್ಮೂರಿನ ಕೆರೆಗೆ ನೀರು ಹರಿಸಬೇಕೆಂದು ಸಾಹಿತಿ ಎಸ್.ಎಲ್.ಭೈರಪ್ಪನವರು ಹಿಂದಿನ ಬಿಜೆಪಿ ಸರ್ಕಾರಕ್ಕೆ ಮನವಿ ಮಾಡಿದ್ದರ ಹಿನ್ನಲೆಯಲ್ಲಿ 20 ಕೋಟಿ ರೂ. ವೆಚ್ಚದಲ್ಲಿ ಕೆರೆಗೆ ನೀರು ಹರಿಸುವ ಕಾಮಗಾರಿ ಕೈಗೊಳ್ಳಲಾಗಿತ್ತು.

ಜನಪ್ರತಿನಿಧಿಗಳು ಹಾಗೂ ಮೇರು ಸಾಹಿತಿಯ ಪ್ರಯತ್ನದ ಫಲವಾಗಿ ದಶಕಗಳ ಬಳಿಕ ಕೆರೆಗೆ ಹೇಮಾವತಿ ನದಿ ನೀರು ಹರಿದು ಕೋಡಿ ಬಿದ್ದಿದೆ. ಈ ಹಿನ್ನಲೆಯಲ್ಲಿ ದೋಣಿಯಲ್ಲಿ ತೆರಳಿ ಗಂಗಾ ಪೂಜೆ ನೆರವೇರಿಸಿ ಶ್ರದ್ಧಾ ಭಕ್ತಿಯಿಂದ



ಬಾಗಿನ ಅರ್ಪಿಸಲಾಯಿತು.

ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಎಸ್.ಎಲ್. ಭೈರಪ್ಪನವರು ಮೈಸೂರು ದಸರಾ ಉದ್ಘಾಟಕರಾಗಿ ಆಯ್ಕೆಯಾದ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಹುಟ್ಟೂರಿನ ಕೆರೆಯನ್ನು ಹೇಮಾವತಿ ನೀರಾವರಿ ಯೋಜನೆಯಿಂದ ತುಂಬಿಸುವಂತೆ ಮನವಿ ಮಾಡಿದ್ದರು. ಕೂಡಲೇ ಮುಖ್ಯಮಂತ್ರಿ ಸರ್ಕಾರದ ಅನುಮೋದನೆ ನೀಡಿದ್ದರು. ನಂತರ ಬಸವರಾಜ ಬೊಮ್ಮಾಯಿ ಅವರು ಹಣ ಬಿಡುಗಡೆ ಮಾಡಿಸಿ ಕಾರ್ಯಯೋಜನೆ ಪೂರ್ಣಗೊಳಿಸಿದರು. ಭೈರಪ್ಪನವರು ಬದುಕಿದ್ದಾಗಲೇ ಈ ಕೆರೆಗೆ ನೀರು ಹರಿಸಲು ಚಾಲನೆ ನೀಡಿದ್ದರು. ಅವರ ಇಷ್ಟದಂತೆ ಅವರ ಪತ್ನಿ ಸರಸ್ವತಿ ಹಾಗು ಪುತ್ರ ಉದಯಶಂಕರ್ ಅವರಿಂದ ಬಾಗಿನ ಅರ್ಪಿಸಿದ್ದೇನೆ. ಈ ಮೂಲಕ ತಾಲ್ಲೂಕಿನ ಜನರ ಪರವಾಗಿ ನನಗೆ ಸಂತೋಷವಾಗಿದೆ ಎಂದರು.

**ಪ್ರವಾಸಿ ತಾಣವಾಗಿಸಲು ಚಿಂತನೆ**

ಸರಾಗವಾಗಿ ನೀರು ಹರಿಯಲು ಪೈಪ್ ಲೈನ್ ಅಳವಡಿಸಲಾಗಿದೆ. ಕೆರೆ ಏರಿ ವಿಸ್ತಾರಗೊಳಿಸಿ ಪ್ರವಾಸಿ ತಾಣವಾಗಿಸುವ ಉದ್ದೇಶವಿದ್ದು ಅದಕ್ಕಾಗಿ 2 ಕೋಟಿ ರೂ. ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಂಜನೇಯ ಸ್ವಾಮಿ ಹಾಗು ಮಲ್ಲೇಶ್ವರ ಸ್ವಾಮಿ ದೇಗುಲಗಳ ಕಾಂಪೌಂಡ್ ನಿರ್ಮಾಣಕ್ಕೆ 10 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿಸುವುದಾಗಿ ಭರವಸೆ ನೀಡಿದರು.

ಎಸ್.ಎಲ್.ಭೈರಪ್ಪ ಅವರ ಕಿರಿಯ ಪುತ್ರ ಎಸ್.ಬಿ.ಉದಯಶಂಕರ್ ಮಾತನಾಡಿ, ನಮ್ಮ ತಂದೆ ಸಾಹಿತ್ಯ ಮಾತ್ರವಲ್ಲದೆ ಸಮಾಜ ಸೇವೆಯನ್ನೂ ಮಾಡಿದ್ದಾರೆ. ಹುಟ್ಟೂರಿನ ಕೆರೆಗೆ ಹೇಮಾವತಿ ನದಿ ನೀರು ತರುವಲ್ಲಿ ಸರ್ಕಾರದ ಗಮನ ಸೆಳೆದು ಸಂತೆ ಶಿವರ ವ್ಯಾಪ್ತಿಯ ಕೆರೆಗಳಿಗೆ ನೀರು ತರುವ ನಿಟ್ಟಿನಲ್ಲಿ ಆದ್ಯತೆ ನೀಡಿದ್ದರು. ಅದರ ಫಲವಾಗಿ 1 ವರ್ಷದಲ್ಲಿ ವ್ಯಾಪ್ತಿಯ ಕೆರೆ ಕಟ್ಟೆಗಳು ತುಂಬಿ ಈ ಭಾಗದ ರೈತರ ಭೂಮಿಯಲ್ಲಿ ಅಂತರ್ಜಲ ಚೇತರಿಕೆ ಕಂಡಿದೆ. ಇದರಿಂದ ವ್ಯಾಪ್ತಿಯ ಜನ ಜಾನುವಾರು, ಪಕ್ಷಿಗಳ ನೀರಿನ ಬವಣೆ ನೀಗಿದೆ. ತಂದೆಯವರ ಕನಸಿನಂತೆ ಗಂಗಾಧರೇಶ್ವರ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಆಗಬೇಕು. ಶಾಸಕರ ಜೊತೆ ದೇವಾಲಯದ ಜೀರ್ಣೋದ್ಧಾರಕ್ಕೆ ಸಹಕಾರ ನೀಡುವುದಾಗಿ ತಿಳಿಸಿದರು.

ಭೈರಪ್ಪನವರ ಪತ್ನಿ ಸರಸ್ವತಿ, ಗ್ರಾಮ ಪಂಚಾಯಿತಿ ಮಾಜಿ ಪ್ರಧಾನ ಪಿ. ವೀರೇಶ್, ಉದ್ಯಮಿ ಭುವನಹಳ್ಳಿ ಯೋಗೇಶ್, ಮುಖಂಡರಾದ ದೊರೆಸ್ವಾಮಿ, ಬೆಳಗಿಹಳ್ಳಿ ಪುಟ್ಟಸ್ವಾಮಿ, ಕುಂಬಾರಳ್ಳಿ ರಮೇಶ್, ಪುರುಷೋತ್ತಮ್, ಎಸ್.ಜಿ.ಚಿರಂಜೀವಿ, ಅನಂತಯ್ಯ, ವೇಣು, ಪ್ರಶಾಂತ್ ಬಾಬು, ಕೆಂಪೇಗೌಡ, ಜಯ ಲಿಂಗೇಗೌಡ, ಎಸ್.ಎಸ್. ಗಂಗೇಗೌಡ ಇತರರಿದ್ದರು.

# 2 ದಿನಗಳ ಆರೋಗ್ಯ ಉಚಿತ ತಪಾಸಣೆ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಆರ್.ಸಿ. ರಸ್ತೆಯಲ್ಲಿರುವ ನೀಲಕಂಠೇಶ್ವರ ಸಮುದಾಯ ಭವನದಲ್ಲಿ ನ.29 ಮತ್ತು 30 ರಂದು ಆರೋಗ್ಯ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ವೇದ ಭಾರತೀ ಜಿಲ್ಲಾ ಸಂಯೋಜಕ ಹರಿಹರಪುರ ಶ್ರೀಧರ್ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಬಹುಕಾಲದಿಂದ ಅನಾರೋಗ್ಯಕ್ಕೆ ತುತ್ತಾಗಿ ಬಳಲುತ್ತಿರುವ ನಗರ ಸುತ್ತಲಿನ ಪ್ರದೇಶಗಳಲ್ಲಿ ರೋಗಿಗಳ ಬಹುಕಾಲದ ಬೇಡಿಕೆ ಪ್ರಕಾರ ರಾಜ್ಯದ ಹೆಸರಾಂತ ವೈದ್ಯ ಡಾ. ವೆಂಕಟರಮಣ ಹೆಗಡೆ ಅವರ ನೇತೃತ್ವದಲ್ಲಿ ತಂಡ ಆರೋಗ್ಯ ಉಚಿತ ತಪಾಸಣಾ ಶಿಬಿರ ಹಮ್ಮಿಕೊಂಡಿದೆ. ದೀರ್ಘಕಾಲದ ಅನಾರೋಗ್ಯ, ಜೀವನಶೈಲಿ ಸಂಬಂಧಿತ ಕಾಯಿಲೆ ಹಾಗೂ




ಜೀರ್ಣಕ್ರಿಯೆ ತೊಂದರೆಗಳಿಂದ ಬಳಲುತ್ತಿರುವ ಜನರಿಂದ ಬಂದ ನಿರಂತರ ಮನವಿ ಹಿನ್ನಲೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಎರಡು ದಿನ ಬೆಳಿಗ್ಗೆ 10 ರಿಂದ ಸಂಜೆ 5ರ ವರೆಗೆ ರೋಗಿಗಳ ತಪಾಸಣೆ, ಸಲಹೆ, ಮಾರ್ಗದರ್ಶನ ನೀಡಲಾಗುತ್ತದೆ. ವೈದ್ಯರು ಸೂಚಿಸಿದ ಔಷಧಿಗಳನ್ನು ಶಿಬಿರ ಸ್ಥಳದಲ್ಲೇ ಖರೀದಿಸಬಹುದಾದ ವ್ಯವಸ್ಥೆಯನ್ನು ರೂಪಿಸಲಾಗಿದೆ ಎಂದರು.

ಶಿಬಿರದಲ್ಲಿ ತಪಾಸಣೆ ಪಡೆಯಲು ಆಸಕ್ತರು ಮುಂಚಿತವಾಗಿ ತಮ್ಮ ಭೇಟಿ ನಿಗದಿಪಡಿಸಿಕೊಳ್ಳುವುದು ಅಗತ್ಯ. ಮಾಹಿತಿಗಾಗಿ 8073320479, 8970822508 ಸಂಪರ್ಕಿಸಬಹುದೆಂದರು.

ಯೋಗಪಟು ನಾಗರಾಜ್, ವೇದ ಭಾರತಿ ಕಾರ್ಯದರ್ಶಿ ನಟರಾಜ್, ನಿಸರ್ಗ ಸೆಂಟರ್‌ನ ಪ್ರವೀಣ್ ಇದ್ದರು.

# ಸಾಲುಮರದ ತಿಮ್ಮಕ್ಕ ಸೇವೆ ಎಂದೆಂದಿಗೂ ಜೀವಂತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಮಗೆ ಮಕ್ಕಳಾಗಲಿಲ್ಲವೆಂಬ ನೋವು ಮರೆಯಲು ರಸ್ತೆ ಬದಿ ಗಿಡಗಳನ್ನು ನೆಟ್ಟ ಸಾಲುಮರದ ತಿಮ್ಮಕ್ಕ ಅವರ ಸೇವೆಯನ್ನು ಜಗತ್ತು ಎಂದೆಂದಿಗೂ ಸ್ಮರಿಸುತ್ತದೆ ಎಂದು ಹಸಿರುಭೂಮಿ ಪ್ರತಿಷ್ಠಾನದ ಜಂಟಿ ಕಾರ್ಯದರ್ಶಿ ಅಹಮದ್ ಹಗರೆ ಹೇಳಿದರು.

ನಗರದ ಚನ್ನಪಟ್ಟಣ ಬಡಾವಣೆಯ ಹಸಿರು ಸಿರಿಯಲ್ಲಿ ಹಮ್ಮಿಕೊಂಡಿದ್ದ ಇತ್ತೀಚೆಗೆ ನಿಧನರಾದ ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿ, ತಿಮ್ಮಕ್ಕ ಅವರು ಅನಕ್ಷರರಾದರೂ ಹಾಗೂ ಮಕ್ಕಳಿಲ್ಲದೆ ಬಂಜೆ ಎಂಬ ಅವಮಾನದಿಂದ ನೊಂದು ರಸ್ತೆಯ ಇಕ್ಕೆಲಗಳಲ್ಲಿ ಸಾಲು ಗಿಡಗಳನ್ನು



ನೆಟ್ಟು ಅವುಗಳ ಆರೈಕೆಯಲ್ಲಿ ತನ್ನ ನೋವನ್ನು ಮರೆಯುತ್ತಾ ಯಾವ ಪ್ರತಿಫಲ ಬಯಸದೆ ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದರು.

ಪ್ರತಿಷ್ಠಾನದ ಗೌರವ ಸಂಸ್ಥಾಪಕ ಅಧ್ಯಕ್ಷ ಆರ್.ಪಿ.ವೆಂಕಟೇಶ್ ಮೂರ್ತಿ ಮಾತನಾಡಿ, ಪ್ರತಿಷ್ಠಾನದಿಂದ ಈಗಾಗಲೇ ಸಾವಿರಾರು ಗಿಡಗಳನ್ನು ನೆಟ್ಟು ಪೋಷಣೆ ಮಾಡುತ್ತಿದ್ದು, ಈ ವರ್ಷ ತಿಮ್ಮಕ್ಕ ಅವರ ಹೆಸರಿನಲ್ಲಿ ಒಂದು ಸಾವಿರ ಗಿಡಗಳನ್ನ ನೆಟ್ಟು ಪ್ರತಿಷ್ಠಾನವು ಪೋಷಣೆ ಮಾಡಬೇಕೆಂದು ಅದಕ್ಕೆ ಸೂಕ್ತ ಜಾಗದ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು.

ಪ್ರತಿಷ್ಠಾನದ ಜಂಟಿ ಕಾರ್ಯದರ್ಶಿ ಮಮತಾ ಪಾಟೀಲ್ ಮಾತನಾಡಿ, ಕಳೆದ ನಾಲ್ಕು ವರ್ಷಗಳ ಹಿಂದೆ ಯಗಚಿ ಜಲಾಶಯದ ತಟದಲ್ಲಿ ತಿಮ್ಮಕ್ಕ ಅವರ ಹೆಸರಿನಲ್ಲಿ ರೋಟರಿ ಮತ್ತು ಇತರೆ ಸಂಸ್ಥೆಗಳು ಸೇರಿ ನೂರಾರು ಗಿಡಗಳನ್ನು ನೆಟ್ಟು ಪೋಷಣೆ ಮಾಡಿದ್ದಾರೆ ಎಂದರು.

ಟ್ರಸ್ಟಿ ಚಿನ್ನೇನಹಳ್ಳಿ ಸ್ವಾಮಿ, ಪ್ರತಿಷ್ಠಾನದ ಅಧ್ಯಕ್ಷ ಸಿ.ಬಿ. ವೆಂಕಟೇಗೌಡ ಮಾತನಾಡಿದರು. ಬಡಾವಣೆಯ ಹಸಿರು ಸಿರಿಯಲ್ಲಿ ಸಪೋಟ ಹಣ್ಣಿನ ಗಿಡ ನೆಡಸಲಾಯಿತು.

ಪ್ರತಿಷ್ಠಾನದ ಉಪಾಧ್ಯಕ್ಷರಾದ ಪಿ.ಪುರುಷೋತ್ತಮ್ ಮತ್ತು ಡಾ. ಮಂಜುನಾಥ್, ಟ್ರಸ್ಟಿಗಳಾದ ಟಿ.ಹೆಚ್. ಅಪ್ಪಾಜಿಗೌಡ, ಶಿವಶಂಕರಪ್ಪ, ಮಂಜುನಾಥ್, ಚಂದ್ರಶೇಖರ್, ಲೆಕ್ಕ ಪರಿಶೋಧಕ ದಿನೇಶ್ ಕುಮಾರ್, ವೇಣುಗೋಪಾಲ್, ರಾಮೇಗೌಡ, ನಾಗೇಶ್ ಹಾಗೂ ಕಾಂಚನಮಾಲ ಇತರರಿದ್ದರು.

# ರೈತರ ಹಿತ ಮರೆತು ಕುರ್ಚಿಗಾಗಿ ಕಾಂಗ್ರೆಸ್ ಕಿತ್ತಾಟ : ಬಿಜೆಪಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರೈತರು ಬದುಕಿಗಾಗಿ ಹೋರಾಡುತ್ತಿದ್ದರೂ, ಕೆಲವು ನಾಯಕರು ಅಧಿಕಾರಕ್ಕಾಗಿ ಕುರ್ಚಿ ಕಿತ್ತಾಟದಲ್ಲಿದ್ದಾರೆ. ಇದು ಸರ್ಕಾರದ ಅಸಮರ್ಪಕತೆ ಮತ್ತು ನಿರ್ಲಕ್ಷ್ಯಕ್ಕೆ ಸ್ಪಷ್ಟ ಉದಾಹರಣೆ ಎಂದು ಶಾಸಕ ಸಿಮೆಂಟ್ ಮಂಜು ಆರೋಪಿಸಿದರು.

ತಾಲೂಕು ಬಿಜೆಪಿ ಮಂಡಲದ ವತಿಯಿಂದ ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿ, ಈ ಭಾಗದ ಕಾಫಿ, ಭತ್ತ, ಮೆಣಸು, ಅಡಿಕೆ, ಏಲಕ್ಕಿ ಸೇರಿ ಎಲ್ಲಾ ಬೆಳೆಗಳು ಮಳೆಯಿಂದ ಸಂಪೂರ್ಣ ನಾಶವಾಗಿ ಬೆಳೆಗಾರರು ಗಂಭೀರ ಪರಿಸ್ಥಿತಿಯಲ್ಲಿಯಲ್ಲಿದ್ದರೂ ಸಹ ಸರ್ಕಾರ ಜಾಣ ಕುರುಡುತನ ಪ್ರದರ್ಶಿಸುತ್ತಿದೆ. ರೈತರ ಬೆಳೆ ಕೊಚ್ಚಿಕೊಂಡು ಹೋಗಿದ್ದರು ಸಹ ಸರ್ಕಾರಕ್ಕೆ ಅಧಿಕಾರದ ಕಿತ್ತಾಟವೇ ಮುಖ್ಯವಾಗಿದೆ. ಬೆಳೆ ಹಾನಿ ಪರಿಶೀಲನೆ ಹಾಗೂ ಪರಿಹಾರದ ಬಗ್ಗೆ ಯಾವುದೇ ಸ್ಪಂದನೆ ಇಲ್ಲ. ಬಡ ರೈತರು ವಿಷ ಕುಡಿಯುವ ಪರಿಸ್ಥಿತಿ ಬಂದಿದೆ. ಇಂತಹ ಸರ್ಕಾರಕ್ಕೆ ನಾಚಿಕೆ ಬೇಕು. ಬೆಳೆ ನಾಶವಾದರೂ ಸಹ ಸರ್ಕಾರ ಪರಿಹಾರ ಘೋಷಣೆಯಲ್ಲಿ ವಿಳಂಬ




ಮಾಡುತ್ತಿರುವುದು ಖಂಡನೀಯ. ರೈತರ ಬದುಕು ಉಳಿಸುವುದು ಸರ್ಕಾರದ ಕರ್ತವ್ಯವಾಗಿದ್ದು, ವೈಯಕ್ತಿಕ ರಾಜಕೀಯ ಆಸಕ್ತಿಗಳನ್ನು ಬದಿಗಿಟ್ಟು ರೈತರ ಪರ ನಿಲ್ಲಬೇಕು ಎಂದು ಒತ್ತಾಯಿಸಿದರು.

ರಾಜ್ಯ ಬಿಜೆಪಿ ರೈತರಿಗೆ ನ್ಯಾಯ ದೊರಕುವ ವರೆಗೆ ರೈತಪರ ಹೋರಾಟ ಮುಂದುವರಿಸುತ್ತದೆ.

ಸರ್ಕಾರ ಕಾಟಾಚಾರಕ್ಕೆ ಪರಿಹಾರ ಘೋಷಿಸದೆ ರೈತರ ಖಾತೆಗೆ ಪರಿಹಾರ ಹಾಕಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ ಮಾತನಾಡಿ, ಕಳೆದ ಎಂಟೂವರೆ ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ರೈತರ ಬಗ್ಗೆ ಯಾವುದೇ ಕಾಳಜಿ ವಹಿಸಿಲ್ಲ. ಶಾಸಕ ಸಿಮೆಂಟ್ ಮಂಜು ಮತ್ತು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಲೆನಾಡಿನ ಬೆಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ ವರದಿ ಸರ್ಕಾರಕ್ಕೆ ಕಳುಹಿಸಿದರೂ, ಇದುವರೆಗೆ ಕ್ರಮ ಕೈಗೊಳ್ಳದಿರುವುದು ಸರ್ಕಾರದ ನಿರ್ಲಕ್ಷ್ಯಕ್ಕೆ ಉದಾಹರಣೆಯಾಗಿದೆ. ಕಾಡಾನೆಕಾಡುಕೋಣ ದಾಳಿಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಬೆಳೆ ನಾಶವಾದರೂ ಪರಿಹಾರ ಸಿಗುತ್ತಿಲ್ಲ ಹೀಗಾಗಿ ರಾಜ್ಯ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಬಿಜೆಪಿ ರಾಜ್ಯವ್ಯಾಪಿ ಹೋರಾಟಕ್ಕೆ ಕರೆ ನೀಡಿದ್ದು, ಡಿಸೆಂಬರ್ 12 ರಂದು ಜಿಲ್ಲಾ ಮಟ್ಟದಲ್ಲಿ ಹಾಗೂ ಡಿಸೆಂಬರ್ 8ರಂದು ಬೆಳಗಾವಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ಬಿಜೆಪಿ ಮಂಡಲ ಅಧ್ಯಕ್ಷ ಅಶ್ವತ್ ವಳಲಹಳ್ಳಿ ಮಾತನಾಡಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸರ್ಕಾರದ ಕಾಲದಲ್ಲಿ ರೈತರಿಗೆ ನೀಡಿದ್ದ ಪರಿಹಾರವನ್ನು ಜನರು ಇನ್ನೂ ನೆನಪಿಸಿಕೊಳ್ಳುತ್ತಾರೆ. ಆದರೆ ಈಗಿನ ಸರ್ಕಾರ ಪರಿಹಾರ ನೀಡದೆ ಜನರ ವಿಶ್ವಾಸ ಕಳೆದುಕೊಂಡಿದೆ. ಮಳೆ, ಕಾಡು ಪ್ರಾಣಿಗಳ ದಾಳಿ, ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಎಲ್ಲ ಸಮಸ್ಯೆಗಳಿಂದ ರೈತರು ಸಂಕಷ್ಟದಲ್ಲಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ದಲಿತರ ಮೇಲೆ ಅನ್ಯಾಯ ಹಾಗೂ ಕೇವಲ ವರ್ಗಾವಣೆಯ ದಂಧೆಗಳಲ್ಲಿ ಈ ಸರ್ಕಾರ ತೊಡಗಿಸಿಕೊಂಡಿದೆ ಎಂದರು.

ಹಳೆ ಬಸ್ ನಿಲ್ದಾಣದಿಂದ ಉಪವಿಭಾಗಾಧಿಕಾರಿ ಕಚೇರಿ ವರೆಗೆ ಮೆರವಣಿಗೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಉಪ ವಿಭಾಗಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನೇತ್ರಾವತಿ ಮಂಜುನಾಥ್, ತಾಲೂಕು ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಹಿತ್ ಕೌಡಳ್ಳಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಧು ಬೊಮ್ಮನಕೆರೆ, ಅಗ್ನಿ ಸೋಮಶೇಖರ್, ನಗರ ಅಧ್ಯಕ್ಷ ಲೋಕೇಶ್, ಮುಖಂಡರಾದ ಬನ್ನಳ್ಳಿ ಪುನೀತ್, ಹುರುಡಿ ಅರುಣ್ ಕುಮಾರ್, ಹೆತ್ತೂರು ದೇವರಾಜ್, ಪ್ರತಾಪ್, ಶಶಿಕುಮಾರ್, ಕ್ಯಾನಹಳ್ಳಿ ವಾಸು, ರಾಜಕುಮಾರ್, ನೇಮಾನ್, ಆಕಾಶ್, ಆಶೀರ್ವಾದ್, ರಾಜಣ್ಣ ಇತರರಿದ್ದರು.

# ಕನ್ನಡ ಭಾಷೆಗೆ 2 ಸಾವಿರ ವರ್ಷಗಳ ಇತಿಹಾಸವಿದೆ: ನಿರ್ವಾಣೇಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಕನ್ನಡ ಭಾಷೆಗೆ 2000 ವರ್ಷಗಳ ಇತಿಹಾಸವಿದೆ ಎಂದು ನಿವೃತ್ತ ಪ್ರಾಂಶುಪಾಲ ಎಂ. ಎನ್. ನಿರ್ವಾಣೇಗೌಡ ತಿಳಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಉದ್ಘಾಟಿಸಿ ಮಾತನಾಡಿ, ಕನ್ನಡ ಅತ್ಯಂತ ಪ್ರಾಚೀನ ಭಾಷೆ, ಏಕೀಕರಣ ಪೂರ್ವದಲ್ಲಿ ಕರ್ನಾಟಕ ವಿವಿಧ ಆಡಳಿತ ಪ್ರದೇಶಗಳಾಗಿ ಛಿದ್ರಗೊಂಡಿತ್ತು. ಇಂದಿನ ಕರ್ನಾಟಕ ರೂಪುಗೊಳ್ಳಲು ಹಲವು ಮಹನೀಯರು ಹೋರಾಡಿದ್ದಾರೆ. ಅವರಲ್ಲಿ ಡೆಪ್ಯೂಟಿ ಚೆನ್ನಬಸಪ್ಪ, ಆಲೂರು ವೆಂಕಟರಾಯರು, ಹುಯಿಲುಗೋಳ ನಾರಾಯಣರಾಯರು ಮುಖ್ಯರು ಎಂದರು.

ಪ್ರಾಂಶುಪಾಲ ಟಿ.ಪಿ. ಪುಟ್ಟರಾಜು ಮಾತನಾಡಿ, ಸಾಧನೆಯನ್ನು ಸ್ಮರಿಸುವ ಗುಣವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ನಾವು ಮಾಡುವ ವಿಷಯದಲ್ಲಿ ಏಕಾಗ್ರತೆ ಬಹಳ ಮುಖ್ಯ. ಕಾಲೇಜಿನ ನಿಜವಾದ ದೇವಾಲಯವೆಂದರೆ ಗ್ರಂಥಾಲಯ. ಅದನ್ನು ವಿದ್ಯಾರ್ಥಿಗಳು ಸದ್ಬಳಕೆಯನ್ನು ಮಾಡಿಕೊಂಡು ಸಾಧನೆಯನ್ನು ಮಾಡಬೇಕು. ಹೃದಯದ ಭಾಷೆಯಾದ ಕನ್ನಡವನ್ನು ಪ್ರೀತಿಸಿ, ಉಳಿದ ಭಾಷೆಗಲನ್ನು ಗೌರವಿಸಬೇಕು. ಕನ್ನಡ ಪುಸ್ತಕಗಳನ್ನು ಓದುವ ಮೂಲಕ ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದರು.

ಸಮಾರಂಭದಲ್ಲಿ ಡಾ. ಪಿ.ಕೆ. ರಾಘವೇಂದ್ರ, ಟಿ.ಕೆ. ಶ್ರೀನಿವಾಸ, ಕೆ.ಎನ್. ರಮೇಶ್, ಜೆ.ಜಿ. ನಟರಾಜ್, ಜಿ. ಪುರುಷೋತ್ತಮ, ಆರ್.ವಿ. ಮನು, ಅಕ್ಷತಾ, ಬೋಧಕ-ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

# ಪೋಕ್ಸೋ ಪ್ರಕರಣ: ಅಪರಾಧಿಗೆ ಶಿಕ್ಷೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಳೇಬೀಡು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಾಖಲಾಗಿದ್ದ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿ ಅಪರಾಧಿಗೆ 10 ವರ್ಷ ಕಾರಾಗೃಹ ಶಿಕ್ಷೆ ಹಾಗೂ 25 ಸಾವಿರ ರೂ. ದಂಡ ವಿಧಿಸಿ ಜಿಲ್ಲಾ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ಹಳೇಬೀಡು ಹೋಬಳಿ ನರಸೀಪುರ ಗ್ರಾಮದ ಶಿವಣ್ಣ ಅಪರಾಧಿ. ನ. 22 ರಂದು ದಾಖಲಾಗಿದ್ದ ಪ್ರಕರಣದ ದೋಷಾರೋಪಣಾ ಪಟ್ಟಿಯನ್ನು ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಜಿಲ್ಲಾ ನ್ಯಾಯಾಧೀಶ ಹೆಚ್.ಎಂ.ದೇವರಾಜು ಅವರು ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಶ್ರೀನಿವಾಸಗೌಡ ವಾದ ಮಂಡಿಸಿದ್ದರು.

# ಡಿ. 4-5ರಂದು ರಾಜ್ಯ ಮಟ್ಟದ ಬಾಲ್ ಬ್ಯಾಡ್ಮಿಂಟನ್




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಹೆಚ್.ಕೆ.ಎಸ್. ಪದವಿ ಪೂರ್ವ ಕಾಲೇಜು ಆವರಣದಲ್ಲಿ ಡಿ. 4 ಮತ್ತು 5 ರಂದು 2025-26ನೇ ಶೈಕ್ಷಣಿಕ ಸಾಲಿನ ರಾಜ್ಯ ಮಟ್ಟದ ಬಾಲ್‌ಬ್ಯಾಡ್ಮಿಂಟನ್ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಗಂಗಾಧರ್ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಹೆಚ್.ಕೆ.ಎಸ್. ಪದವಿ ಪೂರ್ವ ಕಾಲೇಜು ಹಾಗು ಕಾರ್ಕಳದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದಿಂದ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ. ರಾಜ್ಯದ 33 ಶೈಕ್ಷಣಿಕ ಜಿಲ್ಲೆಗಳ 600 ಕ್ರೀಡಾಪಟುಗಳು ಭಾಗವಹಿಸುವರು. ಸಮಾರಂಭದ ಉದ್ಘಾಟನೆ ಡಿ.4ರ ಬೆಳಿಗ್ಗೆ 10 ಗಂಟೆಗೆ ಜರುಗಲಿದೆಯೆಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಕ್ರೀಡಾಕೂಟ ಉದ್ಘಾಟಿಸಲಿದ್ದು ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆ. ಕ್ರೀಡಾ ಧ್ವಜಾರೋಹಣವನ್ನು ಹೆಚ್.ಕೆ.ಎಸ್. ಸಮೂಹ ಶಿಕ್ಷಣ ಸಂಸ್ಥೆಗಳ ಪ್ರಧಾನ ಕಾರ್ಯದರ್ಶಿ ಹಾಗೂ ಬೇಲೂರು ಶಾಸಕ ಹೆಚ್.ಕೆ.ಸುರೇಶ್ ನೆರವೇರಿಸುವರು. ಸಂಸದ ಶ್ರೇಯಸ್ ಪಟೇಲ್ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹ ಸಂಸ್ಥಾಪಕ ಜಿ. ವಿಮಲ್‌ರಾಜ್, ಹೆಚ್.ಕೆ.ಎಸ್. ಪಿಯು ಕಾಲೇಜು ಪ್ರಾಂಶುಪಾಲ ಎ.ಪ್ರವೀಣ್, ಕೃಷ್ಣಮೂರ್ತಿ, ರಮೇಶ್, ಸುನೀಲ್ ಕುಮಾರ್ ಹಾಜರಿದ್ದರು.

# ಅಂಗನವಾಡಿ ಕೇಂದ್ರಗಳಿಗೆ ಶಾಸಕ ಸಿಮೆಂಟ್ ಮಂಜು ಭೇಟಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜೆ.ಪಿ.ನಗರ (ಅಯೋಧ್ಯ ನಗರ) ಅಂಗನವಾಡಿ ಕೇಂದ್ರಕ್ಕೆ ಶಾಸಕ ಸಿಮೆಂಟ್ ಮಂಜು ದಿಢೀರ್ ಭೇಟಿ ನೀಡಿ ಅಂಗನವಾಡಿಯ ಮೂಲಸೌಕರ್ಯ ಪರಿಶೀಲಿಸಿದರು.

ಅಂಗನವಾಡಿ ಕಟ್ಟಡ ಸಂಪೂರ್ಣ ಶಿಥಿಲಗೊಂಡಿರುವುದನ್ನು ಗಮನಿಸಿದ ಶಾಸಕ,

ಹೊಸ ಕಟ್ಟಡ ನಿರ್ಮಾಣ ಮಾಡಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿ, ಮಕ್ಕಳನ್ನು ಬೇರೆ ಕಟ್ಟಡಕ್ಕೆ ಸ್ಥಳಾಂತರಿಸುವಂತೆ ದೂರವಾಣಿ ಮೂಲಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿ,

ಮಕ್ಕಳ ಸುರಕ್ಷತೆಗೆ ಒತ್ತು ನೀಡುವುದಾಗಿ ಇದೇ ವೇಳೆ ಭರವಸೆ ನೀಡಿದರು.

ಬಳಿಕ ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕನಾಯಕನಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ದಿಢೀರ್ ಭೇಟಿ ನೀಡಿ ಅಂಗನವಾಡಿಯ ಮೂಲಸೌಕರ್ಯಗಳು ಮತ್ತು ಕುಂದು ಕೊರತೆಗಳ ಕುರಿತು ಮಾಹಿತಿ ಪಡೆದು ಮಕ್ಕಳಿಗೆ ಉತ್ತಮ ರೀತಿಯ ಪೌಷ್ಟಿಕ ಆಹಾರ ನೀಡುವಂತೆ ಸೂಚನೆ ನೀಡಿದರು.

# ಇತಿಹಾಸದಲ್ಲಿ ಈ ದಿನ

## ನವೆಂಬರ್-30

1016 : ಎಡ್ಮಂಡ್ ಐರನ್‌ಸೈಡ್‌ನ ಮರಣದ ನಂತರ ಡೆನ್ಮಾರ್ಕ್‌ನ ರಾಜ ಕ್ನಟ್ ದಿ ಗ್ರೇಟ್ ಕ್ಯಾನ್ಯೂಟ್ ಇಂಗ್ಲಿಷ್ ಸಿಂಹಾಸನವನ್ನು ಪಡೆದುಕೊಂಡನು.

1487 : ಬವೇರಿಯಾದ ಡ್ಯೂಕ್ ಆಲ್ಬರ್ಟ್ IV ಅವರು ಮ್ಯೂನಿಚ್‌ನಲ್ಲಿ ಮೊದಲ ಜರ್ಮನ್ ಬಿಯರ್ ಶುದ್ಧತೆ ಕಾನೂನನ್ನು (ರೀನ್‌ಹೀಟ್ಸ್ ಗ್‌ಬಾಟ್) ಜಾರಿಗೆ ತಂದರು,

1786 : ಟಸ್ಕನಿಯ ಗ್ರ್ಯಾಂಡ್ ಡ್ಯೂಕ್ ಲಿಯೋಪೋಲ್ಡ್ ದಂಡನೆಯ ಸುಧಾರಣೆಯನ್ನು ಘೋಷಿಸಿದರು, ಇದರಿಂದಾಗಿ ಟಸ್ಕನಿ ಮರಣದಂಡನೆಯನ್ನು ರದ್ದುಗೊಳಿಸಿದ ಮೊದಲ ರಾಜ್ಯವಾಯಿತು.

**ಜನನ**

1858: ಭಾರತೀಯ ವಿಜ್ಞಾನ ಕ್ಷೇತ್ರದ ಪ್ರವರ್ತಕ ಜಗದೀಶ್ ಚಂದ್ರ ಬೋಸ್

1926: ಅಸ್ಸಾಂನ ಪ್ರಸಿದ್ಧ ಗಾಯಕ, ಕವಿ, ಸಂಗೀತ ನಿರ್ದೇಶಕ ಭೂಪೇನ್ ಹಜಾರಿಕಾ

1931: ದೇಶದ ಗಣ್ಯ ಇತಿಹಾಸಗಾರ್ತಿ ರೋಮಿಲಾ ಥಾಪರ್

1935: ಭಾರತದ ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ

1944: ಭಾರತೀಯ ಲೇಖಕಿ ಮೈತ್ರೇಯಿ ಪುಷ್ಪಾ

**ಮರಣ**


2010: ಸ್ವದೇಶಿ ಚಳವಳಿಗೆ ಧ್ವನಿ ನೀಡಿದ ಸಮಾಜ ಚೇತನ ರಾಜೀವ್ ದೀಕ್ಷಿತ್

# ಎಂಸಿಇ ಕಾಲೇಜು ಹಳೆಯ ವಿದ್ಯಾರ್ಥಿ ಡಾ. ಹ್ಯಾರಿ ಮೋರಿಸ್ ನಿಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿ ಹಾಗೂ ದಾನಿ ಡಾ. ಹ್ಯಾರಿ ಮೋರಿಸ್ ಶುಕ್ರವಾರ ನಿಧನರಾದರು.

1976ರ ಬ್ಯಾಚ್‌ನ ವಿದ್ಯಾರ್ಥಿಯಾಗಿದ್ದ ಅವರು ಯುಎಇ ಮೂಲದ ಫ್ಯಾಬ್‌ಟೆಕ್ ಗ್ರೂಪ್ ಆಫ್ ಕಂಪನಿ ಚೇರ್ಮನ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಎಂಸಿಇ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದ ಡಾ. ಮೋರಿಸ್ ಅವರಿಗೆ ನಿರ್ವಹಣೆ ಮತ್ತು ಸಂಸ್ಥಾಪನಾ ಕ್ಷೇತ್ರದಲ್ಲಿ 30ಕ್ಕೂ



ಹೆಚ್ಚು ವರ್ಷಗಳ ಅನುಭವವಿತ್ತು.

ನಿಖರತೆ, ಶಿಸ್ತು ಮತ್ತು ದೂರದೃಷ್ಟಿ ಅವರನ್ನು ಫ್ಯಾಬ್‌ಟೆಕ್ ಅನ್ನು ಮಧ್ಯಪ್ರಾಚ್ಯದ ಇಂಜಿನಿಯರಿಂಗ್ ಮತ್ತು ಕಾನ್‌ಟ್ರ್ಯಾಕ್ಟಿಂಗ್ ಕ್ಷೇತ್ರದ ಪ್ರಮುಖ ಸಂಸ್ಥೆಯನ್ನಾಗಿ ರೂಪಿಸಿತ್ತು. ಅವರ ನೇತೃತ್ವದಲ್ಲಿ 40ಕ್ಕೂ ಹೆಚ್ಚಿನ ಕಂಪನಿಗಳನ್ನು ಒಳಗೊಂಡಿರುವ ಫ್ಯಾಬ್‌ಟೆಕ್ ಗ್ರೂಪ್ ಜಾಗತಿಕ ಮಟ್ಟದಲ್ಲಿ ತನ್ನ ಹೆಜ್ಜೆ ಗುರುತು ಮೂಡಿಸಿದೆ. ಎಂಸಿಇ ಕಾಲೇಜಿನ ಸಭಾ ಭವನ ನಿರ್ಮಾಣಕ್ಕೆ ಅವರು 1.50 ಕೋಟಿ ರೂ. ದೇಣಿಗೆ ನೀಡಿದ್ದು ವಿದ್ಯೆ ಕಲಿಸಿದ ಸಂಸ್ಥೆಗೆ ಗೌರವ ಸೂಚಿಸಿದ್ದನ್ನು ಸ್ಮರಿಸಬಹುದು. ದ್ದರು. ಡಾ. ಮೋರಿಸ್ ಅವರ ನಿಧನಕ್ಕೆ ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ, ಪ್ರಧಾನ ಕಾರ್ಯದರ್ಶಿ ಚೌಡಳ್ಳಿ ಜಗದೀಶ್, ಖಜಾಂಚಿ ಹೆಚ್.ಡಿ.ಪಾರ್ಶ್ವನಾಥ್ ಸಂತಾಪ ಸೂಚಿಸಿದ್ದಾರೆ. ಡಾ. ಹ್ಯಾರಿ ಮೋರಿಸ್ ಅವರ ನಿಧನಕ್ಕೆ ಪ್ರಭಾರ ಪ್ರಾಂಶುಪಾಲ ಡಾ. ಹೆಚ್.ಎಸ್. ನರಸಿಂಹನ್ ಹಾಗೂ ಸಿಬ್ಬಂದಿ ಶ್ರದ್ಧಾಂಜಲಿ ಸಲ್ಲಿಸಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248